



ಹಲವು ಆಕರ್ಷಣೆಗಳ ಉಡುಪಿಯ ಮಲ್ಪೆಯಲ್ಲಿ ಈಗ ಸೀ –ವಾಕ್ ವೇ ಪಾಯಿಂಟ್!

ಇಲ್ಲಿನ ಮೀನುಗಾರಿಕೆ ಬಂದರಿನ ಅಳಿವೆ ಬಾಗಿಲಿನಲ್ಲಿ ದಶಕಗಳ ಹಿಂದೆ ಸಮುದ್ರದ ಅಲೆಗಳ ಹೊಡೆತದ ತೀವ್ರತೆ ತಡೆದು ಮೀನುಗಾರಿಕೆ ದೋಣಿಗಳು ಸುಗಮವಾಗಿ ಸಾಗಲು ಅನುಕೂಲವಾಗುವಂತೆ ಬಂಡೆ ಕಲ್ಲಿನ ತಡೆಗೋಡೆ (ಬ್ರೇಕ್ ವಾಟರ್) ನಿರ್ಮಿಸಿದ್ದರು. ಇದೇ ತಡೆಗೋಡೆಯ ಮೇಲೆ ಈಗ ಸೀ–ವಾಕ್ ವೇ ಪಾಯಿಂಟ್ ನಿರ್ಮಿಸಲಾಗಿದೆ. ಇದು ದೇಶದಲ್ಲಿಯೇ ಎರಡನೆಯದು (ಇನ್ನೊಂದು ಸೀವಾಕ್ ವೇ ಕೇರಳದಲ್ಲಿದೆ.), ರಾಜ್ಯದಲ್ಲಿ ಪ್ರಥಮ!

ಸೀ ವಾಕ್ ವೇ ಪಾಯಿಂಟ್ 450 ಮೀ.ಉದ್ದ, 8 ಅಡಿ ಅಗಲವಿದ್ದು, 32 ದೀಪಗಳನ್ನು ಅಳವಡಿಸಲಾಗಿದೆ. ಹಾದಿಯ ನಡುವೆ ಕಲಾವಿದ ಪುರುಷೋತ್ತಮ ಅಡ್ವೆಯವರು ಸಿಮೆಂಟ್‌ನಿಂದ ನಿರ್ಮಿಸಿದ ಕಡಲಿನತ್ತ ಮುಖ ಮಾಡಿದ ಬೆಸ್ತ ದಂಪತಿಯ ಶಿಲ್ಪ ಆಕರ್ಷಕವಾಗಿದೆ.

ಸೀ –ವಾಕ್ ವೇ ಇಕ್ಕೆಡೆಗಳಲ್ಲಿ ಜಲರಾಶಿ, ಸೀ– ವಾಕ್‌ನ ಪೂರ್ವದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಚಾಚಿದ ಸಮುದ್ರ ಕಿನಾರೆ, ಪಶ್ಚಿಮದಲ್ಲಿ ಭಾದ್ರಗಡ ದ್ವೀಪ ಹಾಗೂ ಸೈಂಟ್ ಮೇರೀಸ್ ದ್ವೀಪದ ಸೌಂದರ್ಯವನ್ನು ಕಾಣಬಹುದು. ಎಡಬದಿಯ ಕಡಲಿನಲ್ಲಿ ಸಾಗುವ ಮೀನುಗಾರಿಕೆ ದೋಣಿಗಳೂ ನಮ್ಮನ್ನು ಆಕರ್ಷಿಸುತ್ತವೆ.

ಇತ್ತೀಚೆಗೆ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಸೀ –ವಾಕ್ ವೇಯನ್ನು ಉದ್ಘಾಟಿಸಲಾಯಿತು.

ಸೀ–ವಾಕ್ ವೇ ಪ್ರವೇಶದಲ್ಲಿಯೇ ಸೈಂಟ್ ಮೇರೀಸ್ ದ್ವೀಪಕ್ಕೆ ಹೋಗುವ ದೋಣಿಗಳು ಪ್ರವಾಸಿಗರನ್ನು ಕರೆದೊಯ್ಯಲು ಸನ್ನದ್ಧವಾಗಿವೆ. ಬಂದರಿನ ಒಂದು ಮೂಲೆಯಲ್ಲಿ ಟೆಬ್ಮಾ ಶಿಪ್ ಯಾರ್ಡ್ ಎಂಬ ಹಡಗು ನಿರ್ಮಾಣ ಸಂಸ್ಥೆಯು ಬೃಹತ್ ಹಡಗನ್ನು ನಿರ್ಮಿಸುತ್ತಿದೆ.

ಹೀಗೆ ಹೋಗಿ:–

ಮಂಗಳೂರಿನಿಂದ ಉಡುಪಿಗೆ 60 ಕಿ.ಮೀ.ದೂರ. ಉಡುಪಿಯಿಂದ ಮಲ್ಪೆಗೆ 5 ನಿಮಿಷಕ್ಕೆ ಒಂದರಂತೆ ಸಿಟಿ ಬಸ್ ಸೌಕರ್ಯವಿದೆ. ಮಲ್ಪೆಯಲ್ಲಿ ಮೀನುಗಾರಿಕೆ ಬಂದರಿಗೆ ತಲಾ ಒಂದು ರೂಪಾಯಿ ಪ್ರವೇಶ ಶುಲ್ಕ ನೀಡಿ ಒಳಪ್ರವೇಶಿಸಿ ಬಂದರಿನೊಳಗಿನಿಂದ ಒಂದು ಕಿ.ಮೀ.ದೂರ ಸಾಗಿದರೆ ಸೀ ವಾಕ್ ವೇ ಪಾಯಿಂಟ್ ಮತ್ತು ಸೈಂಟ್ ಮೇರೀಸ್ ದ್ವೀಪ ಪ್ರವಾಸದ ಟಿಕೆಟ್ ಕೌಂಟರ್ ಸಿಗುತ್ತದೆ.